Reg No. M. 1550.
KODAGU" MERCARA, (Coorg).

39-

ಕೊಡಗು

ಸಂಪಾದಕರು:-ಶ್ರೀ ಪಿ. ಐ. ಚಿಣ್ಣಪ್ಪ, ವಾರ್ಷಿಕ ಚಂದಾ: ರೂ: ೪-೮-೦.

ಸಂಪುಟ ೨೩ | ತಾರೀಕು ೪—೫—೧೯೪೫ನೇ ಶುಕ್ರವಾರ. | ಸಂಚಿಕೆ ೪೭

ಭಾರತ ರಾಜಕೀಯ ಅವಲೋಕನ.

ಲೇ:—'ವಸು'

ಭಾರತದ ವೈಸರಾಯರಾದ ಲಾರ್ಡ್ ವೇವೆಲ್ಲರು ಇಂಗ್ಲೆಂಡಿಗೆ ಹೋದುದು ಬ್ರಿಟಿಷರ ದೃಷ್ಟಿಯಿಂದ ಪ್ರಾಮುಖ್ಯ ವಿಚಾರವಾಗಿರಬಹುದಾದರೂ ಭಾರತೀಯರಿಗೆ ಇದರಿಂದ ಯಾವ ಲಾಭವಾಗುವಂತಿಲ್ಲವೆಂಬುದು ಎಲ್ಲರಿಗೂ ತಿಳಿದಿದ್ದ ವಿಚಾರ. ವೇವೆಲ್ಲರು ಲಂಡನಿಗೆ ಹೋಗಿ ಅಮೆರಿ, ಚರ್ಚಿಲ್ಲರೊಡನೆ ಹಿಂದೂಸ್ತಾನದ ವಿಚಾರ ಮಾತುಕತೆ ನಡೆಸಿದರೆಂದೂ ಆದರೆ ಅವರು ಯಾವ ವಿಚಾರಕ್ಕೂ ಒಪ್ಪಲಿಲ್ಲವೆಂದೂ ಆದ್ದರಿಂದ ವೇವೆಲ್ಲರಿಗೆ ಚಿಂತೆ ಹುಟ್ಟಿ ರಾಜೀನಾಮೆ ಕೊಡಲಿರುವರೆಂದೂ ವಾರ್ತೆಗಳು ಕೇಳಿಬರುತ್ತಿವೆ. ಇವರಲ್ಲಿ ಎಷ್ಟರ ಮಟ್ಟಿನ ನಿಜಾಂಶವಿರಬಹುದೆಂದು ನಾವೇ ಊಹಿಸಿ ತಿಳಿದುಕೊಳ್ಳಬೇಕು. ಇದೊಂದು ಕಣ್ಣಾಮುಚ್ಚಾಲೆಯ ನಾಟಕವಿದ್ದರೂ ಇರಬಹುದು. ವೇವೆಲ್ಲರು ಲಂಡನಿಗೆ ಹೋದ ಪ್ರಾಮುಖ್ಯ ವಿಚಾರ ಇದಲ್ಲವೆಂದು ಹೊಳೆಯತೊಡಗಿದೆ. ಜರ್ಮನಿಯು ಯುದ್ಧ ಮುಕ್ತಾಯವಾಗುವ ಚಿಹ್ನೆಗಳು ಕಂಡುಬರುತ್ತಿರುವ ಈ ಸಮಯದಲ್ಲಿ ಅವರು ಮುಂದೆ ಜಪಾನರ ಮೇಲೆ ಆಕ್ರಮಣ ನಡೆಸುವ ಸಮಾಲೋಚನೆ ಮಾಡುತ್ತಿರಬಹುದು. ಈ ದೃಷ್ಟಿಯಿಂದ ವೇವೆಲ್ಲರು ಲಂಡನಿಗೆ ಹೋಗಿರಬಹುದು. ಇತ್ತಲಾಗಿ ಕಮಾಂಡರ್-ಇನ್-ಚೀಫರಾದ ಆಚಿನ್‌ಲೆಕ್ಕರೂ ಕೂಡ ಲಂಡನಿಗೆ ಹೊರಟಿರುವದನ್ನು ನೋಡಿದರೆ ಈ ಊಹನೆಗೆ ಬೆಂಬಲಕೊಡುವಂತಿದೆ.

ಮುಂದೆ ಜಪಾನರ ಮೇಲೆ ಧಾಳಿ ಮಾಡುವಾಗ ಹಿಂದೂದೇಶವು ಪ್ರಧಾನ ಪಾತ್ರ ವಹಿಸಬೇಕಿದೆ. ಹಿಂದೂದೇಶವು ನಿಲ್ದಾಣವಾಗಿ ಪರಿಣಮಿಸುವದು. ಈ ಪರಿಸ್ಥಿತಿಯಲ್ಲಿ ಹಿಂದೂದೇಶದ ವ್ಯವಸ್ಥೆಯು ಮಹತ್ವಸ್ಥಿಂಬುದರಲ್ಲಿ ಸಂಶಯವಿಲ್ಲ. ಆ ದಕ್ಕಾಗಿ ವೇವೆಲ್ಲರಿನ್ನು ಕರೆಸಿ ವಿಚಾರವಿನಿಮಯ ನಡೆಯುತ್ತಿರಬಹುದು. ವೇವೆಲ್ಲರ ಪಯಣವು ರಾಜಕೀಯ ದೃಷ್ಟಿಯಿಂದ ಫಲಕಾರಿಯಾಗಲಾರದು. ಭಾರತದ ಪರಿಸ್ಥಿತಿಯು ಸುಧಾರಿಸುವ ಚಿಹ್ನೆಯೂ ಕಂಡುಬರಲಾರದು.

ಇದೇ ಸಮಯದಲ್ಲಿ ಸ್ಯಾನ್ ಫ್ರಾನ್ಸಿಸ್ಕೋದಲ್ಲಿ ಜಗತ್ತಿನ ಭವಿಷ್ಯದ ರೂಪರೇಖೆಯ ಚರ್ಚೆಯಾಗುತ್ತಿದೆ. ಹಿಂದೂದೇಶದ ಪ್ರತಿನಿಧಿಗಳೆಂದು ಬ್ರಿಟಿಷ್ ಸರಕಾರವು ಸರ್ ರಾಮಸ್ವಾಮಿ ಮೊದಲಿಯಾರ್, ಸರ್ ಫಿರೋಜ್‌ಖಾನ್‌ನೂನ್ ಮತ್ತು ವಿ. ಟಿ. ಕೃಷ್ಣಮಾಚಾರಿ ಇವರನ್ನು ಕಳುಹಿಸಿದೆ. ಇವರು ನಿಜವಾಗಿಯೂ ಹಿಂದೂದೇಶದ ಜನರ ಪ್ರತಿನಿಧಿಗಳಲ್ಲವೆಂದೂ ಬ್ರಿಟಿಷ್ ಸರಕಾರದ ಕೈಗೊಂಬೆಗಳೆಂದೂ ಸಾರ್ವತ್ರಿಕ ಅಭಿಪ್ರಾಯ ವ್ಯಕ್ತಮಾಡಲ್ಪಟ್ಟಿದೆ. ಸ್ಯಾನ್‌ಫ್ರಾನ್ಸಿಸ್ಕೋದಲ್ಲಿರುವ ಶ್ರೀಮತಿ ವಿಜಯಲಕ್ಷ್ಮಿ ಪಂಡಿತರು ನಿಷ್ಕಳಂಕ ವಚನಗಳಿಂದ ಇವರು ಹಿಂದೂದೇಶದ ಜನತೆಯ ನ್ಯಾಯವಾದ ಪ್ರತಿನಿಧಿಗಳಲ್ಲ; ತನಗೆ ನಿಜವಾದ ಪ್ರತಿನಿಧ್ಯವಿಲ್ಲದ ಸಮ್ಮೇಳನದಲ್ಲಿ ತೀರ್ಮಾನವಾಗುವ ವಿಚಾರಗಳಿಗೆ ಹಿಂದೂದೇಶ ಬದ್ಧವಾಗಿರಲಾರದೆಂದು ನುಡಿದಿದ್ದಾರೆ. ಸಮ್ಮೇಳನದಲ್ಲಿ ರಾಮಸ್ವಾಮಿ ಮೊದಲಿಯಾರರು ಸ್ಪಷ್ಟವಾಗಿ ಭಾಷಣಮಾಡಿದರೂ ಹಿಂದೂದೇಶದ ಸ್ವಾತಂತ್ರ್ಯದ ವಿಚಾರ ಮಾತೆತ್ತಲಿಲ್ಲ. ಯಾವ 'ಡಂಬರ್ಟನ್ ಓಕ್ಸ್' ಮಾತುಕತೆಯಲ್ಲಿ, ಭವಿಷ್ಯ ಜಗತ್ತಿನ ರೂಪರೇಖೆಯನ್ನು ಚಿತ್ರಿಸಲಾಗಿತ್ತೊ ಅದರ ಆಧಾರದ ಮೇಲೆ ಈಗ ಸ್ಥೂಲ ಚರ್ಚೆಯಾಗುತ್ತಿದೆ. 'ಡಂಬರ್ಟನ್' ಮಾತುಕತೆಯಲ್ಲಿ ಸಾರಿದ ಸರ್ವರಾಷ್ಟ್ರಗಳ ಸಮಾನ ಹಕ್ಕುಬಾಧ್ಯತೆಯ ವಿಚಾರದಲ್ಲಿ ಸಾನ್ ಫ್ರಾನ್ಸಿಸ್ಕೋ ಸಮ್ಮೇಳನವು ಪ್ರಥಮದಲ್ಲೇ ತಪ್ಪು ಹೆಜ್ಜೆ ಇಡತೊಡಗಿದೆ.

ಹಿಂದೂದೇಶವು ಅಖಂಡವಾದ ರಾಷ್ಟ್ರ, ಜಗತ್ತಿನ ಐದರಲ್ಲಿ ಒಂದಂಶ ಜನರು ಇಲ್ಲಿರುವರು. ಇಷ್ಟು ಜನಸಂಖ್ಯೆಯನ್ನು ಎಂದಿನಂತೆ ಗುಲಾಮಗಿರಿಯಲ್ಲಿರಿಸುವದು ಇವರ ನೀತಿಯಾದರೆ ಅದು ಶಾಂತಿ ಸಮ್ಮೇಳನವಾಗದೆ ಮುಂದಿನ ಉತ್ಪಾತಿಯ ಕಾರಸ್ಥಾನವಾಗುವದು. 'ಡಂಬರ್ಟನ್' ಮಾತುಕತೆಯ ಕಾಲಕ್ಕೆ ಪ್ರೆಸಿಡೆಂಟ್ ರೂಸ್‌ವೆಲ್ಟರಿದ್ದರು. ಪ್ರತಿರಾಷ್ಟ್ರಗಳ ಸಮಾನ ಹಕ್ಕು ಬಾಧ್ಯತೆಗಳ ವಿಚಾರ ಎತ್ತಿ ಹಿಡಿದವರೂ ಅವರೇ. ಆದರೆ ಹಿಂದೂದೇಶವು ಬ್ರಿಟಿಷರ ಅಂತರಿಕ ವಿಚಾರವೆಂದೂ ಅದಕ್ಕೆ ಬೇರೆ ರಾಷ್ಟ್ರಗಳು ಕೈಹಾಕಬಾರದೆಂದೂ ಚರ್ಚಿಲ್ಲರು ಎಲ್ಲರನ್ನೂ ಸಮಾಧಾನ ಪಡಿಸಿರುವರು. ಇದನ್ನು ಒಪ್ಪಿ ಇತರ ರಾಷ್ಟ್ರಗಳೂ ತಲೆಬಾಗಿರುವ ಕಾರಣ-ಯಾವ ಶಾಂತಿಗಾಗಿ ಜಗತ್ತಿನ ಈ ರಾಷ್ಟ್ರಗಳು ಇಂದು ಸಭೆಗೂಡಿ ಪ್ರಯತ್ನಿಸುತ್ತಿರುವವೋ ಅದು ನಿಷ್ಫಲ, ವಾಯಿತೆಂದು ಈಗಲೇ ಹೇಳಬಹುದು. ಹಿಂದೂದೇಶದ ಸ್ವಾತಂತ್ರ್ಯದ ಪ್ರಶ್ನೆಯನ್ನಾಗಲಿ ಈ ಶಾಂತಿಸಮ್ಮೇಳನದಲ್ಲಿ ಎತ್ತಲ್ಪಡಲಿಲ್ಲ; ಎಂದಿನವರೆಗೆ ಈ ರಾಷ್ಟ್ರಗಳು ಹಿಂದೂದೇಶದ ಸ್ವಾತಂತ್ರ್ಯದ ಘೋಷಣೆಗೆ ಬೆಂಬಲಕೊಟ್ಟು ಬ್ರಿಟಿಷರ ನೊಗದಿಂದ ಭಾರತವನ್ನು ಬಿಡಿಸಲು ಯತ್ನಿಸುವದಿಲ್ಲ, ಅಂದಿನವರೆಗೆ ಈ ಶಾಂತಿ ಸಮ್ಮೇಳನಗಳು ನಿಷ್ಫಲವೆಂದು ಸಾರಿ ಹೇಳಬಹುದು ಒಂದು ಕಡೆಯ ಜನರನ್ನು ಗುಲಾಮಗಿರಿಗೆಗೆ ಈಡುಮಾಡಿ ಮತ್ತೊಂದೆಡೆ ಉದಾತ್ತ ತತ್ವಬೋಧನೆಯು ಕುಹಕನೀತಿ ಸದಾಕಾಲಕ್ಕೂ ಸರಿಹೋಗಲಾರದು. ಭಾರತವು ಬಹುವಾಗಿ ನೊಂದಿದೆ. ಭಾರತೀಯರ ಔದಾಸೀನ್ಯದಿಂದ, ಅಧಿಕಾರಿಗಳ ದರ್ಪದಿಂದ, ವಿದೇಶಿಯರ ಅನ್ಯಾಯದಿಂದ ಬಳಲಿ ಬೆಂಡಾಗಿದೆ. ಆದರೆ ಹೀಗೆ ಎಂದಿನವರೆಗೂ ಭಾರತವು ದಾಸ್ಯಪಂಕದಲ್ಲಿ ತೊಳಲುವದು ಸಾಧ್ಯವಿಲ್ಲ. ಭಾರತೀಯರು ಕಳೆದ ಮಹಾಯುದ್ಧದಲ್ಲಿ ಜಗತ್ತಿನ ಸ್ವಾತಂತ್ರ್ಯಕ್ಕಾಗಿ, ಪ್ರಜಾಪ್ರಭುತ್ವದ ರಕ್ಷಣೆಗಾಗಿ ತಮ್ಮ ರಕ್ತವನ್ನು ಜಗತ್ತಿನ ನಾನಾ ರಣಕ್ಷೇತ್ರದಲ್ಲಿ ಚೆಲ್ಲಿದರು. ಆದರೆ ಅವರಿಗೆ ದೊರೆತ ಉಡುಗೊರೆಯೇನು? ಆದರೂ ಕೂಡ ಸಹನಶೀಲ ಭಾರತೀಯರು ಪುನಹ ಜಗತ್ತಿನ ಸ್ವಾತಂತ್ರ್ಯ ರಕ್ಷಣೆಗೆ ತಮ್ಮ ಕೆನ್ನೀರಿನ ಹೊಳೆಯನ್ನು ಇಂದು ಹರಿಸುತ್ತಿದ್ದಾರೆ. ಈ ಯುದ್ಧದಲ್ಲಿ ತಾ. 28-2-45ರ ವರೆಗೆ 19,420 ಜನರನ್ನು ರಣರಂಗದಲ್ಲಿ ಬಲಿಕೊಟ್ಟು, 13375 ಜನರು ಕಾಣದಾಗಿ, 51,038 ಜನರು ಜಖಂಗೊಂಡು, 79,701 ಜನರು ಶತ್ರುವಶವಾಗಿ ಹೀಗೆ 1,63,486 ಜನ ತಮ್ಮ ಮಕ್ಕಳನ್ನು ಭರತಖಂಡವು ತ್ಯಾಗಮಾಡಿದೆ. ರಷ್ಯಾ, ಅಮೇರಿಕಾ, ಬ್ರಿಟನ್ ಮತ್ತು ಚೀನಾ ಇವುಗಳನ್ನು ಬಿಟ್ಟರೆ ಈ ಯುದ್ಧದಲ್ಲಿ ವಿಜಿತ್ರರಾಷ್ಟ್ರಗಳ ಪೈಕಿ ಅಸಿಮತ್ಯಾಗಮಾಡಿದ ರಾಷ್ಟ್ರವೆಂದರೆ ಭರತಖಂಡ. ಆದರೆ ಇಂಥಾ ತ್ಯಾಗಮಾಡಿದ ಭರತಖಂಡಕ್ಕೆ ತಮ್ಮ ಪ್ರೀತಿಗೆ ಪಾತ್ರರಾದ ಪ್ರತಿನಿಧಿಗಳನ್ನು ಸಮ್ಮೇಳನಕ್ಕೆ ಕಳುಹಿಸುವ ಅಧಿಕಾರವಿಲ್ಲ. ಭರತಖಂಡವು ಗುಲಾಮರ ಗುಲಾಮನಾಗಿ ಪರಿತಪಿಸುತ್ತಿದೆ. ಜಗತ್ತಿನ ಶಾಂತಿಗೆ ಬೀಗದ ಕೈ ಭರತಖಂಡ. ಸ್ಯಾನ್‌ಫ್ರಾನ್ಸಿಸ್ಕೋ ಶಾಂತಿ ಸಮ್ಮೇಳನವು ಕುರಿತ ಮಹಾತ್ಮರ ಹೇಳಿಕೆಯನ್ನು ಯುದ್ಧ ಮತ್ತ ರಾಷ್ಟ್ರಗಳು ಗಮನಿಸದೆ ಹೋಗಬಹುದು. ಇವರೆ ಜಗತ್ತಿನ ರಾಷ್ಟ್ರಗಳು ಇಂದಲ್ಲವಿದ್ದರೂ ಎಂದಾದರೊಮ್ಮೆ ಮಹಾತ್ಮರ ಉದಾತ್ತ ತತ್ವಗಳ ಮಹಿಮೆಯನ್ನು ತಿಳಿಯದಿರರು. ಮಹಾತ್ಮರನ್ನು ಜಗತ್ತು ಶಾಂತಿಸಂದೇಶಬೀರಿದ ಕ್ರಿಸ್ತನಂತೆ, ದೈವಿಪುರುಷ ಮಹಮ್ಮದನಂತೆ ಸ್ಮಾರ್ಥಿಸುವ ದಿನವು ಬೇಗ ಬರಲಿ.

ಗೋರಿಂಗ್‌ರ ರಾಜೀನಾಮೆ.

ಫೀಲ್ಡ್‌ಮಾರ್ಷಲ್ ಗೋರಿಂಗ್‌ರವರು ಹೃದಯರೋಗದಿಂದ ನರಳುತ್ತಿರುವರು ಎಂಬುದಾಗಿ ಜರ್ಮನ್ ರೇಡಿಯೋ ತಿಳಿಸುವದು.

ಈ ಕಾರಣದಿಂದ ಜರ್ಮನ್ ವಿಮಾನಗಳ ಕಮ್ಯಾಂಡರ್ ಇನ್‌ಚೀಫ್ ಸ್ಥಾನದಿಂದ ತಮ್ಮನ್ನು ಬಿಡುಗಡೆ ಮಾಡಬೇಕೆಂದು ಗೋರಿಂಗ್‌ರವೇ ಹಿಟ್ಲರರನ್ನು ಪ್ರಾರ್ಥಿಸಿದರು. ಆದ್ದರಿಂದ ಹಿಟ್ಲರರು ಒಪ್ಪಿ ಗೋರಿಂಗರನ್ನು ಆ ಸ್ಥಾನದಿಂದ ಬಿಡುಗಡೆ ಮಾಡಿದ್ದಾರೆ.

—೦೦—

ಮುಸೊಲಿನಿಯ ಬಂಧನ.

ಮುಸೋಲಿನಿಯವರನ್ನು ಬಂಧಿಸಿಡಲಾಗಿದೆ ಎಂಬುದಾಗಿ ಮುಂದು ವರದಿ ತಿಳಿಸುವದು. ಮುಸ್ತೋಲಿನಿಯವರು ಮಿಲಾನ್ ನಗರದಲ್ಲಿದ್ದರು ಎಂಬುದಾಗಿ ಹಿಂದೆ ವರದಿಯಾಗಿತ್ತು. ಈಗಲೂ ಮಿಲಾನ್ ನಗರದಲ್ಲಿ ದಂಗೆ ಎದ್ದಾಗ ಮುಸೋಲಿನಿಯವರೂ ಅದೇ ನಗರದಲ್ಲಿಯೇ ಇದ್ದರೆಂದು ಸ್ವಿಟ್ಜರ್ಲಿಂಡಿನ ವರದಿ ತಿಳಿಸುವದು. ಇತರ ವರದಿಗಳಲ್ಲಿ ಮುಸೋಲಿನಿಯವರು ಕೋಮೋ ಪಟ್ಟಣಕ್ಕೆ ಪರಾರಿಯಾಗಿ ಹೋದರೆಂದೂ ಆದರೆ ಆ ಪಟ್ಟಣವನ್ನೂ ದೇಶಭಕ್ತ ಇಟಾಲಿಯನ್ ಸೈನಿಕರು ಹಿಡಿದರೆಂದೂ ತಿಳಿಸಲಾಗಿದೆ.

—೦೦—

ಬಡವರ ಕಾಮಧೇನು ಕಾಂಗ್ರೆಸಿಗೆ ಓಟು ಕೊಡಿರಿ.

ಕೊ ಡ ಗು

ತಾ. ೪-೫-೧೯೪೫ನೇ ಶುಕ್ರವಾರ

ಕಾಂಗ್ರೆಸ್ಸಿಗೆ ಮತವೀಯಿರಿ.

'ರೈತರ ಉದ್ಧಾರವಾಗಬೇಕಾದರೆ ಅದು ರೈತರಿಂದಲೇ ಆಗಬೇಕು. ಹೊರವ ರ ಹೇಳಿಕೆಗೆ ಒಳಗಾಗಿ ಆ ಮೂಲಕ ತನ್ನ ಅಭಿವೃದ್ಧಿಯನ್ನು ಸಾಧಿಸಿಯೇನೆಂಬುದು ಶುದ್ಧ ಮೌಢ್ಯತೆ. ದೇಶದ ಮುಖಂಡ ರೇನೂ ಮಂತ್ರವಾದಿಗಳಲ್ಲ; ಹಾಗಿದ್ದಿದ್ದ ಪಕ್ಷ ಭಾರತೀಯರ ಧ್ಯೇಯವು ಎಂದೋ ಕರಗತವಾಗುತಿತ್ತು. ಆದರೆ ಆ ದು ಹಾಗಿಲ್ಲ ಪ್ರತಿಯೊಬ್ಬನೂ ತನ್ನ ಜವಾಬ್ದಾರಿಯನ್ನರಿತು ಮುಂದಿನ ಏಳಿಗೆ ಗೆ ಪ್ರಯತ್ನಿಸಿದರೇನೇ ಎಲ್ಲರ ಕಲ್ಯಾಣವು ಸಾಧಿಸೀತು. ಭಾರತದ ಧ್ಯೇಯ ಸಾಫ ಲ್ಯವೂ ಆದೀತು' ಇಂದು ಸೆರೆಮನೆಯಲ್ಲಿ ರುವ ಭಾರತದ ಆಶಾಜ್ಯೋತಿ ಜವಾಹರ ಲಾಲರು ನುಡಿದ ನುಡಿದು. ಈ ಮಾತ ನ್ನು ಸಾರ್ಥಕಗೊಳಿಸುವ ಸಂದರ್ಭವೊಂ ದು ಕೊಡಗಿನವರಾದ ನಮಗೆ ಇಂದು ದೊರೆತ್ತಿದೆ. ರೈತರಾದ ನಾವು ನಮ್ಮ ಮೇ ಲ್ಮೆಗಾಗಿ, ನಮ್ಮ ದೇಶದ ಕಲ್ಯಾಣಕ್ಕಾಗಿ ನಮ್ಮ ಸೇವೆಯನ್ನು ಸಲ್ಲಿಸಬಹುದಾದ ಸಂ ದರ್ಭ ಸನ್ನಿಹಿತವಾಗಿದೆ. ಲೆಕ್ಕಕ್ಕಿಲ್ಲದೆ ಮೂಲೆಗುಂಪಾಗಿಸಲ್ಪಟ್ಟಿರುವ ರೈತರಾದ ನಮಗಿರುವ ಒಂದೇ ನಾಗರೀಕ ಹಕ್ಕೆಂದರೆ ಓಟು. ಈ ಮಹತ್ವಪೂರ್ಣವಾದ ಓ ಟನ್ನು ಸಫಲಪಯೋಗಪಡಿಸುವದಕ್ಕಲ್ಲಿ ನ ಮ್ಮ ಘನತೆಯೂ, ರಾಷ್ಟ್ರದ ಅಭಿವೃದ್ಧಿ ಯೂ ಸಮಾವೇಶವಾಗಿವೆ.

ಇಂದು ನಮ್ಮ ಈ ಓಟಿಗಾಗಿ ನಮ್ಮ ಕಾಲುಬುಡಕ್ಕೆ ಎಂ. ಎ. ಬಿ. ಎ. ಪದವಿ ಧರರು, ಬರುತ್ತಿರುವದನ್ನು ಗಮನಿಸಿರಿ. ಇಂದು ಅವರು ಮಾಡುತ್ತಿರುವ ನಮಸ್ಕಾ ರಗಳು, ಅವರು ನುಡಿಯುತ್ತಿರುವ ಸವಿ ನುಡಿಗಳನ್ನು ಪರಿಶೀಲಿಸಿರಿ. ಇದೆಲ್ಲಾ ಯಾವ ದೃಷ್ಟಿಯಿಂದ. ನಮ್ಮ ಓಟನ್ನು ಅಪಹರಿಸುವ ಹೃಷ್ಟಿಯಿಂದ. ಇಂಥಾ ಸಂದರ್ಭದಲ್ಲಿ ಮತದಾರರಾದ ನಾವು ನಮ್ಮ ಓಟನ್ನು ಸದುಪಯೋಗಪ ಡಿಸಬೇಕು. ಹಾಗಾದರೆ ಓಟು ಯಾರಿ ಗೆ ಕೊಡಬೇಕು?

ಕೌನ್ಸಿಲಿನಲ್ಲೇ ಆಗಲಿ, ಜಿಲ್ಲಾ ಬೋ ರ್ಡಿನಲ್ಲೇ ಆಗಲಿ ನಾವು ಕಳುಹಿಸುವ ಪ್ರ ತಿನಿಧಿಗಳಿಂದ ನಮಗೆ ಲಾಭವಾಗಬೇಕಾ ದರೆ ಅಲ್ಲಿ ಇವರಿಗೆ ಇತರರ ಬೆಂಬಲದೊರೆ ಯಬೇಕು. ಇಲ್ಲದಿದ್ದಕ್ಕೆ ಒಬ್ಬ ವ್ಯಕ್ತಿ ಯು ಎಷ್ಟೇ ಬುದ್ಧಿವಂತನಿದ್ದರೂ ಹೆಚ್ಚಿನ ದೇನನ್ನೂ ಅಲ್ಲಿ ಸಾಧಿಸಲಾರನು. ಇಂ ದು ಕಾಂಗ್ರೆಸು ಕೌನ್ಸಿಲಿನಲ್ಲಿ ಹನ್ನೊಂದು ಸ್ಥಳಗಳನ್ನು ಈಗಲೇ ಪಡೆದಿದೆಯೆನ್ನ ಬಹುದು. ಎರಡು ಸ್ಥಳಗಳಿಗೆ ಮಾತ್ರ ಸ್ಪ ರ್ಧೆಯಿದೆ. ಹದಿನೆಂಟರಲ್ಲಿ ಹನ್ನೊಂದು ಕಾಂಗ್ರೆಸ್ ಪಕ್ಷದ ಕರಗತವಾಗಿವೆ. ಒಂ ದು ವೇಳೆ ನಾವು ನಮ್ಮದೇ ಸಂಸ್ಥೆಯಾದ ಕಾಂಗ್ರೆಸಿಗೆ ಓಟುಕೊಡದೆ ಕಾಂಗ್ರೆಸಿಗೆ ವಿ ರೋಧನಿಂತಿರುವವರಿಗೆ ಓಟು ಕೊಟ್ಟರೂ ಈ ಎರಡು ವ್ಯಕ್ತಿಗಳು ಕೌನ್ಸಿಲಿನಲ್ಲಿ ಏನ ನ್ನು ಸಾಧಿಸಲಾಪರು. ಬಹುಮತದ ಬೆಂಬ ಲವಿಲ್ಲದೆ ಯಾವ ಕಾರ್ಯವೂ ಸಾಧಿಸಲ್ಪ ಡದು. ಆದ್ದರಿಂದ ನಮ್ಮ ಓಟನ್ನು ವ್ಯ ರ್ಥಗೊಳಿಸದೆ ಕಾಂಗ್ರೆಸ್ಸಿಗೆ ಕೊಡಬೇಕಾ ದುದು ಧರ್ಮ.

ಇದರಿಂದ ಕಾಂಗ್ರೆಸ್ಸೇತರ ಉಮೇ ದುವಾರರನ್ನು ತೀಕಿಸುವದಲ್ಲ. ಆವರೂ ದೇಶಸೇವೆ ಮಾಡುವವರಾದರೆ, ಕಾಂಗ್ರೆಸಿ ನ ತತ್ವಪಾಲಕರಾದರೆ ಕಾಂಗ್ರೆಸಿಗೆ ವಿರು ದ್ಧ ಯಾಕೆ ನಿಲ್ಲಬೇಕು? ದೇಶೀಯರ ಸಂ ಸ್ಥೆಯಾದ ಕಾಂಗ್ರೆಸಿಗೆ ಶರತುಹಾಕಿ ಕೂಡ ಬಯಸುವ ಅಧಿಕಾರ ಸ್ಥಳ ದೊರೆಯುವಿ ಷ್ಟರಿ ಕಾಂಗ್ರೆಸ್ಸಿಗೇ ವಿರೋಧನಿಲ್ಲಬಯಸು ವ ಇವರ ಗೂಢವೇನಿರಬಹುದು. ಕೇವ ಲ ಕೌನ್ಸಿಲಿನ ಯೂ ಜಿಲ್ಲಾ ಬೋರ್ಡಿನ ಕುರ್ಚಿಗಾಗಿ ಕಾಂಗ್ರೆಸಿನ ವಿಮಲತತ್ವಗಳ ನ್ನು ಬಲಿಕೊಡುವವರಿಗೆ ಮತಕೊಡುವ ದು ಸರಿಯಲ್ಲ. ಕಾಂಗ್ರೆಸು ಜಗತ್ತಿನ ಇಂದಿನ ಅತ್ಯದ್ಭುತ ಸಂಸ್ಥೆ. ಬಡ ಜನರ ಹಿತಕ್ಕಾಗಿ, ನಾಡಿನ ಏಳಿಗೆಗಾಗಿ, ದೇಶದ ಸ್ವಾತಂತ್ರ್ಯಕ್ಕಾಗಿ ಹೆಣಗುತ್ತಿರುವ ಸಂ ಸ್ಥೆ. ಇಂಥಾ ಸಂಸ್ಥೆಗೆ ವಿರುದ್ಧನಿಂತಿರು ವ ವ್ಯಕ್ತಿಗಳ ತತ್ವವೇನು? ಹೊರಗೆ ಖಾದಿ ಧರಿಸಿ ಯಾ ಧರಿಸದೆ, ತ್ಯಾಗಮೂಡಬೇಕಾದ ಕಾಲದಲ್ಲಿ ತ್ಯಾಗಮೂಡದೆ ಪದವಿಗೆ ಮಾತ್ರ ಮುಂ ದೆ ಬಂದು ಕಾಂಗ್ರೆಸ್ಸಿಗೆ ವಿರುದ್ಧನಿಂತು 'ನಾನೂ ಕಾಂಗ್ರೆಸು' ಎಂದು ಹೇಳಲು ಅಂಜಿದವರನ್ನು ಜಗತ್ತೆ ಗುರುತಿಸಿ ತಿಳಿಯಬೇಕು. ಕಾಂಗ್ರೆಸು ಜಡವರ ಸಂ ಸ್ಥೆ. ಅಧಿಕಾರಕ್ಕಾಗಿ ಅಂಡಲೆಯುವವ ರ ಸಂಸ್ಥೆಯಲ್ಲ ತ್ಯಾಗಮೂರ್ತಿಗಳ ಸಂಸ್ಥೆ. ಮಹಾತ್ಮರಂಥಾ ಯೋಗಿವರ್ಯರ ಸೂ ತ್ರ ಚಾಲನೆಯಂತೆ ನಡೆಯುತ್ತಿರುವ ಸಂ ಸ್ಥೆ. ಬಡ ಜನಸೇವೆಯನ್ನು ತನ್ನ ಹೃದ ಯದ ಉಸಿರಾಗಿ, ಜೀವದ ಜೀವಾಳವಾ ಗಿ ಇಟ್ಟುಕೊಂಡಿರುವ ಸಂಸ್ಥೆ. ಇಂಥಾ ಸಂ ಸ್ಥೆಯ ಉಮೇದುವಾರರಿಗೆ ನಮ್ಮ ಓಟು ಹೋಗಬೇಕು.

'ಕೊಡಗಿನಲ್ಲಿ ಜನ ಜಾಗೃತಿಯೂಗಿರು ವದಿಲ್ಲ; ಆದ್ದರಿಂದ ಹೇಗಾದರೂ ಜನತೆ ಯನ್ನು, ಕಳ್ಳನ ಮೋಹದಲ್ಲಿ, ಮಾತಿನ ಮ ಲ್ಲತನದಲ್ಲಿ ಪುಸಲಾಯಿಸಿ ಓಟು ಪಡೆಯ ಬಹುದೆಂದು ಇವರು ಊಹಿಸಿರ ಬಹುದು. ಇಲ್ಲದಿದ್ದರೆ ಜನತೆಯ ಸಂಸ್ಥೆಯೂದಕಾಂ ಗ್ರೆಸನ್ನು ವಿರೋಧಿಸುವ ಎದೆಗಾರಿಕೆ ಹೇಗೆ ಬರಬೇಕು.? ಓಟರರೇ, ಎಚ್ಚರಿಕೆ! ಚು ನಾವಣೆ ಕಾಲದಲ್ಲಿ ತಮ್ಮ ಹೇಳಿಕೆಗಳನ್ನು ಅಂದವಾಗಿ ಮುಂದಿಡಬಲ್ಲ ಇವರ ಮಾತಿ ಗೆ ಬೆಲೆ ಕಟ್ಟುವದರಿಂದ ನಮ್ಮ ಅಸ್ತಿತ್ವಕ್ಕೆ ಧಕ್ಕೆ ತಂದು ಕೊಂಡಂತೆ. ನಾವು ಎಂದಿನವ ರೆಗೆ ನಮ್ಮ ಮತವನ್ನು ದೇಶದ ಕಲ್ಯಾಣ ದ, ಜನತೆಯ ಹಿತದ ದೃಷ್ಟಿಯಿಂದ ಉಪ ಯೋಗಿಸುವದಿಲ್ಲವೋ ಅಂದಿನ ವರೆಗೆ ನಾ ವು ಪರಾಸರೆಂಬುದನ್ನು ಮರೆಯದಿರಿ. ಕಾಂಗ್ರೆಸಿಗೆ ವಿರುದ್ಧ ನಿಲ್ಲುವದು ಶುದ್ಧ ಮೌಢ್ಯತೆಯೆಂಬ ಪಾಠವನ್ನು ಈ ಕಾಂಗ್ರೆ ಸ್ಸೇತರ ಉಮೇದುವಾರರಿಗೆ ಕಲಿಸಲು ಮ ರೆಯದಿರಿ. ಓಟಿನ ಬೇಟೆಗಾರರ ಸವಿಮಾತು ಗಳಿಂದ ದಿಗ್ಮೂಢರಾಗಿ ತಮ್ಮ ಸ್ಥಿರತೆಯ ನ್ನು ಕಳಕೊಂಡು ಅವರು ಹೇಳಿದಂತೆ ಕು ಣಿಯಲು ತೊಡಗಿದರೆ ತಮಗೆ ಅಹಿತವು ದ್ದೇಶಕ್ಕೆ ಹಾನಿಯೂ ಆಗುವದೆಂಬುದನ್ನ ಮರೆಯದಿರಿ.

ವ ರ್ತ ಮಾ ನ.

ಶ್ರೀ. ಕೀತಿರ ಮೇದಪ್ಪನವರನ್ನು ಕೊಡಗಿನ ಸಿವಿಲ್ ಸರ್ಜನರಾಗಿ ನೇಮಿಸಲಾಗಿದೆಯೆಂದು ತಿಳಿಯಬರುತ್ತದೆ.

ಮಿಸ್ ಕೊಂಗಾಂಡ ಶೀಲಾ ಅಚ್ಚಯ್ಯನವರು ಕಳೆದ 'ಮಾಷ್ಟರ್ ಆಫ್ ಸರ್ಜರಿ' ಪರೀಕ್ಷೆಯಲ್ಲಿ ಉತ್ತೀರ್ಣರಾಗಿರುವರು. ಇವರು ಎಂ. ಬಿ. ಬಿ. ಎಸ್. ಪರೀಕ್ಷೆಯಲ್ಲಿ ಕಳೆದ 40 ವರ್ಷಗಳ ರೆಕಾರ್ಡನ್ನು ಮುರಿದು ಒಂದನೇ ತರಗತಿಯಲ್ಲಿ ತೇರ್ಗಡೆಯಾಗಿದ್ದರು.

ಶ್ರೀ ಬಿದ್ದಂಡ ಉತ್ತಯ್ಯನವರ ಪುತ್ರ ಅಪ್ಪಚ್ಚನವರ ಮದುವೆಗೆ ಸಾರಾಯಿ ಸೇರಿಸಿದ್ದರೂ ಕೆಲವು ಸಮಾಜ ಸೇವಕರು ಕೇಳಿ ಕೊಂಡತೆ ಅವರು ಮದುವೆಯಲ್ಲಿ ಸ ರಬರಾಯಿ ಮಾಡದೆ ಬಾಕಿ ಮಾಡಿದರು. ಶ್ರೀ ಬಲ್ಯಂಡ ಪೂನಯ್ಯನವರು ಮತ್ತು ಮನೆಯಪಂಡ ಚಿಂಣಪ್ಪನವರು ಮಡಿಕೇರಿ ಸಮಾಜ ಸೇವಕರು ಕೇಳಿಕೊಂಡಂತೆ ತಮ್ಮ ಮುಕ್ಕಳ ಮದವೆಗಳಿಗೆ ಮಾದಕ ಪದಾರ್ಥ ಸೇರಿಸುವದನ್ನು ಮನ್ನಾ ಮಾಡುವ ಮೂತ ಕೊಟ್ಟಿರುವರು. ಹೇಶಕಲ್ಯಾಣದ ಉದಾಹರಣೆಗಳು ಇವು.

ಮಡಿಕೇರಿ ಮಹಿಳಾ ಸಹಕಾರಿ ಸಮಾಜದ ಆಶ್ರಯದಲ್ಲಿ ನಡೆಯುತ್ತಿರುವ ಹಿಂದೀಪ್ರಚಾರ ಶಾಲೆಯಿಂದ ಕಳೆದ ಪ್ರಾಥಮಿಕ ಪರೀಕ್ಷೆಗೆ ಕೂತ 20 ವಿದ್ಯಾರ್ಥಿನಿಗಳಲ್ಲಿ ಕೆಳಗಿನ 19 ಜನರು ತೇರ್ಗಡೆಯಾಗಿರುವರು. ಶ್ರೀಮತಿಯರಾದ ಎಂ. ಎಂ. ಮುತ್ತಮ್ಮ, ಎಸ್. ಎಸ್. ಗೌರಮ್ಮ, ಸಿ. ಎಸ್. ಪೂವಮ್ಮ, ಎ. ಪಿ. ಲಕ್ಷ್ಮೀದೇವಿ, ಟಿ. ಎಸ್. ಸೀತಾಲಕ್ಷ್ಮಿ (ಇವರು ಪ್ರಥಮ ಶ್ರೇಣಿಯಲ್ಲಿ) ಪಿ. ಬಿ. ಸರೋಜಿನಿ, ಎ. ಲಕ್ಷ್ಮೀದೇವಿ, ಟಿ. ಲಲಿತಮ್ಮ, ಕೆ. ಎಂ. ಸೀತಮ್ಮ, ಕೆ. ಕೆ. ತಂಗಮ್ಮ, ಕೆ. ಕೆ ನಂಜಮ್ಮ, ಎಸ್. ಯೋಗಾಂಬಾಳ್, ಎಸ್. ಎಸ್. ಕಾಮವ್ವ, ಎಸ್. ಎಸ್. ಸುಬ್ಬಮ್ಮ, ಕೆ. ಕೆ. ಮಂಜುಳ, ಬಿ. ಎ. ಪಂಕಜ, ಬಿ. ಕೆ. ಶಾರದ, ಸಿ. ಎ. ಕಾಮವ್ವ, ಮತ್ತು ಕೆ. ಎ. ಪಾರ್ವತಿ ಇವರುಗಳು.

ಕಳೆದ ಫೆಬ್ರವರಿ ತಿಂಗಳಲ್ಲಿ ವೀರಾಜಪೇಟೆ ಕೇಂದ್ರದಲ್ಲಿ ನಡೆದ ಹಿಂದೀ ಪ್ರಾಥಮಿಕ ಪರೀಕ್ಷೆಯಲ್ಲಿ ಶ್ರೀಗಳಾದ ಕೆ. ಎಂ. ಶಿವರಾಮು (ಪ್ರಥಮಶ್ರೇಣಿ) ಎ. ಎಸ್. ರತಿ, ಬಿ.ಜಿ. ರುಕ್ಮಿಣಿ, ಕೆ. ಜಿ. ಕಮಲ, ಪಿ. ಎ. ಶಾರದಾಮಣಿ, ಪಿ. ಎನ್. ದೇವಮ್ಮ, ಎನ್. ಎನ್. ಹೊನ್ನಮ್ಮ, ಎಂ. ಪಿ. ವಿಮಲ, ಕೆ. ರಮೇಶ್, ಎ. ಎನ್. ವಿಷ್ಣುಮೂರ್ತಿ, ಮತ್ತು ಬಿ. ಎ. ಬಸವರಾಜ ಇವರುಗಳೂ ಮಾಧ್ಯಮಿಕ ಪರೀಕ್ಷೆಯಲ್ಲಿ ಶ್ರೀಮತಿ ಪಿ ಎನ್. ಸೀತಮ್ಮನವರೂ ಉತ್ತೀರ್ಣರಾಗಿರುವರು. ಇಲ್ಲಿಯ ಹಿಂದೀ ಪ್ರಚಾರ ಮಂಡಳಿಯಿಂದ ಪ್ರಾಥಮಿಕ ಪರೀಕ್ಷೆಗೆ ಕೂತ ಹತ್ತು ವಿದ್ಯಾರ್ಥಿಗಳಲ್ಲಿ ಹಂಭತ್ತು ಜನರು ತೇರ್ಗಡೆಯಾಗಿರುವರು.

ತಾ. 29-5-45ರಲ್ಲಿ ಮಡಿಕೇರಿಯಲ್ಲಿ ನಡೆದ ದಿ. ಕೊರವಂಡ ಅಪ್ಪಚ್ಚನವರ ಪುತ್ರ ನಂಜಪ್ಪನವರ ಮದುವೆಗೆ ಮಾದಕ ಪದಾರ್ಥಗಳನ್ನು ಸೇರಿಸಿದ ಕಾರಣ ಮದುವೆಗೆ ಬಂದಿದ್ದ ಕೆಲವರು ತಮ್ಮ ನಿಷೇಧವನ್ನು ವ್ಯಕ್ತ ಮಾಡಿ ಹಣ ಕಟ್ಟಿ ಊಟ ಮಾಡದೆ ಹೊರಟು ಹೋದರು.

ಕೊಡಗಿನ ಪ್ರತಿಯೊಬ್ಬ ರೈತನು ಮೇ ತಿಂಗಳ 1ನೇ ತಾರೀಖು ಕಳೆದ ತಕ್ಷಣ ತನ್ನ ಬಳಿಯಲ್ಲಿ ಮೂರಾಟಕ್ಕಿರುವ ಹೆಚ್ಚಿನ ಆಹಾರಧಾನ್ಯಗಳ ಪರಿಮಾಣವನ್ನು ಬ ರಹ ಮೂಲಕ ಕೊಡಗು ಅ. ಕಮಿಷನರ ಪರ್ಸನಲ್ ಅಸಿಸ್ಟೆಂಟರಿಗೆ ಬರೆದು ತಿಳಿಸ ಬೇಕೆಂದು ಪ್ರಕಟಿಸಲಾಗಿದೆ. ಸ್ವಂತ ಉ ಪಯೋಗದ ಅಂದರೆ ತನಗೆ ತನ್ನ ಸಂಸಾರಕ್ಕೆ ವರ್ತ್ತು ಆಳುಗಳಿಗೆ ಮುಂದಿನ ಬಿತ್ತಿ ಕೊಯ್ಯುವವರಿಗೆ ಮತ್ತು ಬೀಜಕ್ಕೆ ಬೇಕಾ ಗುವಷ್ಟು ಬತ್ತವನ್ನು ಬಿಟ್ಟು ಉಳಿದುದರ ಲೆಕ್ಕ ಕೊಡಬೇಕು. ರೈತರು ಕೊಟ್ಟ ಹೇಳಿಕೆಗಳ ಮೇಲೆ ಸಂಶಯ ಬಂದರೆ ಆ ವುಗಳನ್ನು ಪರಿಶೀಲಿಸುವ ಅಧಿಕಾರ ಸರ ಕ್ಕಾರಕ್ಕಿದೆ. ಮೇ 15 ರೊಳಗೆ ಲೆಕ್ಕ ಕೊಡದವರ ಮೇಲೆ-ಕ್ರಮ ಜರಗಿಸುವ ಸಾಧ್ಯತೆಯೂ ಇದೆ.

ಮೂರಾಟಕ್ಕಿದೆ.

ಮಡಿಕೇರಿ ಮಹದೇವ ಪೇಟೆ ಚೌಕಿಯಲ್ಲಿರುವ ಬ್ಲಾಕ್ ನಂ. ೪ರ ಸರ್ವೆ ನಂ. 85 ರ, ವಾಸಕ್ಕೂ ಅಂಗಡಿ ಮಳಿಗೆಗೂ ಅ ಕೂಲವಾಗಿರುವ ನಲ್ಲಿ, ಹತ್ತಲು, ಕೊಟ್ಟಿಗೆ ಇವುಗಳಿಂದ ಕೂಡಿದ ವಿದ್ಯುತ್ ದೀಪಗ ಳಿರುವ ಒಂದು ದೊಡ್ಡ ಮಹಡಿ (ಈಗಿನ Warunny Dispensary) ಮನೆ ಯುಮೂರಾಟಕ್ಕಿದೆ. ಬೇಕಾದವರು ಈ ಕೆಳಗಿನ ವಿಳಾಸದವರನ್ನು ವಿಚಾರಿಸಿ.

C/o. "ಕೊಡಗು"
ಮಡಿಕೇರಿ.

ನಮಗಿವರು ಬೇಡ.

1. ನಮ್ಮ ಕೂಗಿಗೆ ಕಿವಿಗೊಡದವರು ಬೇಡ.
2. ಸರಕಾರದ ಆಶಾವಚನಗಳಿಗೆ ಶಿರಬಾಗುವವರು ಬೇಡ.
3. ಸಾವಿರಾರು ಓಟರುಗಳ ಹಿತವನ್ನು ಸರ್ಕಾರದ ಶಹಬಾಸ್‌ಗಿರಿಗೆ ಬಲಿಕೊಡುವವರು ಬೇಡ.
4. ಟೀ, ಕಾಫಿ, ಸೇಂದಿ, ದುಡ್ಡುಗಳಿಂದ ಓಟು ಪಡೆಯಲೆತ್ನಿಸುವವರು ಬೇಡ.
5. ಅಧಿಕಾರಕ್ಕಾಗಿ ಕಾಂಗ್ರೆಸನ್ನವರು ಬೇಡ.
6. ಜನಹಿತದಾಯಿನಿಯಾದ ಬಡವರ ಕಾಮಧೇನುವಾದ ಸಂಸ್ಥೆಗೆ ವಿರೋಧನಿಂತವರು ಬೇಡ.

ಪೊನ್ನಂಪೇಟೆ ಶ್ರೀಮಂಗಲ ನಾಡು ಜಮ್ಮ ಓಟರುಗಳಲ್ಲಿ ವಿನಂತಿ.

ನಾನು ನಮ್ಮ ಪೊನ್ನಂಪೇಟೆ ಶ್ರೀಮಂಗಲ ನಾಡಿಗೆ ಜಮ್ಮ ಓಟರುಗಳ ಪ್ರತಿನಿಧಿಯಾಗಿ ಕೊಡಗು ಲೆಜಿಸ್ಲೇಟಿವ್ ಕೌನ್ಸಿಲಿಗೆ ಒಬ್ಬ ಉಮೇದಾರನಾಗಿ ನಿಂತಿರುತ್ತೇನೆ. ತಮ್ಮೆಲ್ಲರ ಅಮೂಲ್ಯವಾದ ಓಟನ್ನು ನನಗೆ ತಾ. 14-5-1945 ರಲ್ಲಿ ಕೊಟ್ಟು ತಮ್ಮ ಸೇವೆಯನ್ನು ಕೌನ್ಸಿಲ್ ಮುಖಾಂತರ ಘಾಡುವುದಕ್ಕೆ ನನಗೆ ಅವಕಾಶ ಕೊಡಬೇಕಾಗಿ ಅತಿವಿನಯದಿಂದ ಪ್ರಾರ್ಥಿಸುತ್ತೇನೆ.

3-3 ಕೋಳೆರ ಕರುಂಬಯ್ಯ

ಪ್ರಕಟಣೆ.

ವೀರರಾಜೇಂದ್ರಪೇಟೆ ನಾಡು ಬೆಳ್ಳರಿಮಾಡು ಗ್ರಾಮದ ತಾತಿರ ಮೇದಪ್ಪನು ಈ ಮೂಲಕ ಸರ್ವಸ್ವ ಜನರಿಗೂ ತಿಳಿಯಪಡಿಸುವುದೇನಂದರೆ–ನನ್ನ ತಮ್ಮ ಬಿದ್ದಪ್ಪನು ಮೃತಪಟ್ಟು ಸುಮಾರು ಹತ್ತೊಂಬತ್ತು ವರ್ಷಗಳಾಯಿತ. ತಮ್ಮ ಬಿದ್ದಪ್ಪನಿಗೆ ಪುತ್ರ ಪುತ್ರಿ ಸಂತತಿಗಳಿರುವುದಿಲ್ಲ. ತಮ್ಮ ಬಿದ್ದಪ್ಪನ ಹೆಂಡತ್ತಿ ಪೂವವ್ವನು ಆ ಲಾಗಾಯಿತು ನಮ್ಮ ಮನೆಯಲ್ಲೇ ಇರುವದಾಗಿದೆ. ಸದರಿ ಪೂವವ್ವನಿಗೆ ಕುಟುಂಬದಿಂದ ಜೀವನಕ್ಕೆ ಹಕ್ಕೇ ಹೊರತು ಕುಟುಂಬದ ಆಸ್ತಿಯ ಮೇಲೆ ಯಾವ ಹಕ್ಕುಭಾದ್ಯತೆಯಿರುವುದಿಲ್ಲ. ಸದರಿ ಪೂವವ್ವನಿಗೆ ಜೀವನಾಂಶಕ್ಕೆ ಯಾವ ತೊಂದರೆ ಇರುವುದಿಲ್ಲ. ಇವಳು ಕುಟುಂಬದ ಆಸ್ತಿಯನ್ನು, ಗಿರ್ವಿ ಯಾ ಭೋಗ್ಯ ಬರ ಕೊಟ್ಟು ಅನಾವಶ್ಯ ಸಾಲಪಡೆದು ಆಸ್ತಿಗಳನ್ನು ದುರುಪಯೋಗಮಾಡಿ ಕುಟುಂಬಕ್ಕೆ ನಷ್ಟ ಕಷ್ಟತರಲು ಪ್ರಯತ್ನಿಸುತ್ತಾಳೆ. ಆದರಿಂದ ದಕ್ಷಿಣ ಕೊಡಗು ತಾಲೋಕು ವೀರಾಜಪೇಟೆನಾಡು ಬೆಳ್ಳರಿಮಾಡು ಗ್ರಾಮದಲ್ಲು ಮತ್ತು ಮೈತಾಡಿ ಗ್ರಾಮದಲ್ಲು ನನ್ನ ಹೆಸರಿನಲ್ಲು ಜಮಾಬಂದಿ ನಡೆದುಬರುವ ಯಾವ ಆಸ್ತಿಗಳನ್ನೂ ಪೂವವ್ವನಿಂದ ಗಿರ್ವಿ ಯಾ ಭೋಗ್ಯ ಆಧಾರ ಬರೆಸಿಕೊಂಡು ಲೇವಾದೇವಿ ನಡಿಸಕೂಡದು. ಆಲ್ಲಿ ಪೂವವ್ವನಿಗೆ ಯಾರೂ ಮೈಸಾಲ ಸಹ ಕೊಡಕೂಡದು ಹಾಗೆ ಕೊಟ್ಟಲ್ಲು ಕುಟುಂಬದ ಚರಸ್ಥಿರ ಆಸ್ತಿಗಳಿಂದ ಸಾಲ ವಸೂಲಾತಿಗೆ ಆಸ್ಪದಸಿಗಲಾರದು. ಸದರಿ ಪ್ರಕಟಣೆ ವಿಷಯಗಳನ್ನು ಉಲ್ಲಂಗಿಸಿ ಪೂವವ್ವನಲ್ಲು ಲೇವಾದೇವಿ ನಡಿಸಿದಲ್ಲು ಆವಳಿಂದ ಬರೆಸಿಕೊಂಡ ಸರ್ವಬಾಬಿನ ಆಧಾರ ರದ್ದಾಗಿರತಕ್ಕದ್ದು. ಮತ್ತು ಈ ಸಮ್ಮಂದ ಮುಂದಕ್ಕೆ ಆಗುವ ಸರ್ವ ನಷ್ಟ ಕಷ್ಟಗಳಿಗೆ ಲೇವಾದೇವಿ ಕೊಟ್ಟವರೇ ಬದ್ದರಾಗಿರತಕ್ಕದ್ದು.

ತಾ. 29-3-45 ಟಿ. ಎ. ಮೇದಪ್ಪ.

3-3

ದಿ ನಿಖಿಲ ಕರ್ನಾಟಕ ಸೆಂಟ್ರಲ್ ಆಯುರ್ವೇದಿಕ್ ಫಾರ್ಮಸಿ, ಲಿಮಿಟೆಡ್, ಮೈಸೂರು.

ಇವರ ಸಿದ್ಧೌಷಧಗಳು.

1. **ನಿಕಾಫ್ ಟೂತ್ ಪೌಡರ್.** ಬೆಲೆ ಪೊಟ್ಣ ಒಂದಕ್ಕೆ 0-1-0
(ಹಲ್ಲುನೋವು, ಕೀವು ಮತ್ತು ರಕ್ತ ಸುರಿಯುವುದು, ನಾರುವುದು ಇತ್ಯಾದಿಗಳಿಗೆ)
2. **ಪಾಮುರಿ ಚೂರ್ಣ** .... ಬೆಲೆ ಪೊಟ್ಣ ಒಂದಕ್ಕೆ 0-6-0
(ಕಜ್ಜಿ, ತುರಿ, ವಿಷಬು, ಇತ್ಯಾದಿ ಎಲ್ಲಾ ಚರ್ಮ ರೋಗಗಳಿಗೆ)
3. **ಬಾಲವರ್ಧಿನಿ ಮಿಶ್ರಣ** .... ಬೆಲೆ ಬಾಟ್ಲಿ ಒಂದಕ್ಕೆ 1-4-0
(ಮಕ್ಕಳ ದುರ್ಬಲತೆ, ಹೊಟ್ಟೆಯುಬ್ಬರ, ಅಜೀರ್ಣ ಮತ್ತು ವಾಂತಿ ಇತ್ಯಾದಿಗಳಿಗೆ)
4. **ದ್ರಾಕ್ಷಾರಿಷ್ಟ** .... ಬೆಲೆ ಒಂದು ಬಾಟ್ಲಿಗೆ 2-6-0
ರಕ್ತಕಾಸ, ಕ್ಷಯ, ಹೃದಯ ದೌರ್ಬಲ್ಯ, ಕಾರ್ಶ್ಯಗಳಿಗೆ)

ಉಚಿತ ಕ್ಯಾಟಲಾಗಿಗೆ ಬರೆಯಿರಿ—

ಸೋಲ್ ಏಜೆಂಟ್ಸ್ (ಮೈಸೂರು ಮತ್ತು ಕೊಡಗು)
ದಿ ಆಶ್ವಿನಿ ಮೆಡಿಕಲ್ ಹಾಲ್,
11) 215, ಸುಲ್ತಾನ್ ಪೇಟೆ, ಬೆಂಗಳೂರು ಸಿಟಿ.

ಧಾತು ವೃದ್ಧಿ ರಸಾಯನ (ZANDU)

" ರ್ಯಾಕ್ಯೂ—ಫಾಸ್‌ಫೋ—ಮೂಲ್ಪ "

ಎಂದು ಪ್ರಸಿದ್ಧ ಡಾಕ್ಟರುಗಳು ಮುಕ್ತ ಕಂಠದಿಂದ ಹೊಗಳುತ್ತಿದ್ದಾರೆ.

ಈ ರಸಾಯನ } ಕಾಯಿಲೆಯವರಿಗೆ, ಆರೋಗ್ಯದಿಂದಿರುವವರಿಗೆ, ಧಾತು ಕ್ಷೀಣತೆಯುಳ್ಳವರಿಗೆ, ರೋಗ ನಿವೃತ್ತಿಯಾಗಿ ಸುಧಾರಿಸಿಕೊಳ್ಳುವವರಿಗೆ, ಅಶಕ್ತರಿಗೆ ಟಾನಿಕ್.

ವಿದ್ಯಾರ್ಥಿಗಳಿಗೆ, ವಕೀಲರಿಗೆ, ವೈದ್ಯರಿಗೆ, ಡಾಕ್ಟರರಿಗೆ, ಶ್ರಮ ಜೀವಿಗಳಿಗೆ, ರೋಗಿಗಳಿಗೆ, ನಿರೋಗಿಗಳಿಗೆ, ಗೃಹಸ್ಥಾಶ್ರಮಿಗಳಿಗೆ, ಬ್ರಹ್ಮಚಾರಿಗಳಿಗೆ, ಸ್ತ್ರೀಯರಿಗೆ, ಪುರುಷರಿಗೆ—ಎಲ್ಲರಿಗೂ ಬೇಕಾದ ರಸಾಯನವಿದು. ಇದು ಜಠರಾಗ್ನಿಯನ್ನು ಸರಿಪಡಿಸುವುದು. ಮೆದುಳಿಗೆ ತಂಪನ್ನುಂಟುಮಾಡುವುದು, ನಾಲಿಗೆಗೆ ರುಚಿಯೂಗಿರುವುದು. ಇದರಲ್ಲಿ ನವಜೀವನಕರವಾದ ಎಲ್ಲಾ ವಿಟಮಿನ್ನುಗಳು ಕೆಂಪು ರಕ್ತ ಕಣಗಳನ್ನು ಹೆಚ್ಚಿಸುವ ಅಮೂಲ್ಯ ಔಷಧಿಗಳಿವೆ.

ಇದರಲ್ಲಿ ಇಲೆಕ್ಟ್ರಿಕ್ ಫಾಸ್‌ಫೋಮೂಲ್ಪ್, ಹೆಮೋಗ್ಲೋಬಿನ್, ಸೋದಿಗ್ಲಿಸರೊ ಫಾಸ್‌ಫೇಟ್ ಪೆಪ್ಟನ್, ಸಾಲ್ಪ್, ಮೂಲ್ಪ್ ಎಕ್ಸ್‌ಟ್ರಾಕ್ಟ್, ದಾಕ್ಷಾಸವ ಮೊದಲಾದ ಪ್ರಸಿದ್ಧ ಔಷಧಿಗಳಂತವಿದೆ. ಇಂದಿನಿಂದಲೇ ಸೇವಿಸಿ ಅನುಭವ ಪಡೆಯಿರಿ. ಇದು ಎಲ್ಲಾ ಪ್ರಸಿದ್ಧ ಔಷಧ ಷಾಪುಗಳಲ್ಲಿವೆ.

ಝುಂಡು ಫಾರ್ಮಸ್ಯುಟಿಕಲ್ ವರ್ಕ್ಸ್ ಲಿಮಿಟೆಡ್,
27) ಗೋಖಲೆ ರೋಡ್, ಬೋಂಬೆ.

ಹಿಟ್ಲರ್ ಮೃತನಾದ?

ಮುಸಲೋನಿಯು ಸೆರೆಹಿಡಿಯಲ್ಪಟ್ಟು ಕೊಲ್ಲಲ್ಪಟ್ಟಕ್ಕು. ಹಿಟ್ಲರನು ಸತ್ತನು. ಗೋರಿಂಗನು ಹೆಂಡತಿ ಮಕ್ಕಳೊಡನೆ ಐದು ವಿಲಿಯ ಸಂಪತ್ತೊಡಗೂಡಿ ಪಲಾಯನಮಾಡಿದನು. ಗೋಬೆಲ್ಸನು ಸುತ್ತು ಹೊತ್ತಿಕೊಂಡುರಿಯುತ್ತಿರುವ ಬರ್ಲಿನಿನಲ್ಲಿ ಸಿಕ್ಕಿ ಬಿದ್ದಿದ್ದಾನೆ. ಹಿಮ್ಲರನು ಸಂಧಾನದ ಶರತ್ತುಗಳನ್ನು ಮುಂದೆ ಮಾಡಿ ಸೆರಗೊಡ್ಡಿ ಬೇಡುತ್ತಿದ್ದಾನೆ. ಇವು ಜರ್ಮನಿಯಿಂದ ಈ ವಾರ ಬಂದ ವಾರ್ತೆಗಳ ಸೂಕ್ಷ್ಮರೂಪ. ಬರ್ಲಿನ್ ನಗರದ ಯುದ್ಧ ಮುಕ್ತಾಯವಾದಂತೇ ಎಂದೂ, ಆದು ಮಿತ್ರರ ವಶವಾದಂತಾಯಿತೆಂದೂ ವಾರ್ತೆಗಳು ತಿಳಿಸುತ್ತವೆ. ಮುಸಲೋನಿಯು ಕೊಲ್ಲಲ್ಪಟ್ಟನೆಂಬ ವರದಿಯನ್ನು ಕಣ್ಣಾರೆ ಕಂಡವರೊಬ್ಬರು ಪ್ರಕಟಿಸಿದ್ದಾರೆ. ಜನರು ಮುಸಲೋನಿಯನ್ನು ದೇಶದ್ರೋಹಿಯೆಂದು ಛೀಗಳೆದು ಆತನ ಹೆಣಕ್ಕೆ ಉಗುಳಿದರೆಂದು ಈತನು ವರದಿಮಾಡಿದ್ದಾನೆ!.

ಹಿಮ್ಲರನು ಜರ್ಮನಿಯ ಸರ್ವಾಧಿಕಾರವನ್ನು ತಾನು ವಹಿಸಿ ಬ್ರಿಟನ್ ಅಮೇರಿಕಾಗಳೊಡನೆ ಒಪ್ಪಂದಕ್ಕೆ ಬರುವ ಶರತ್ತುಗಳನ್ನು ಮುಂಕೆ ಹಾಕ್ಕಿದ್ದನಂತೆ. ತಾನು ನಿಜವಾಗಿಯೂ ಒಪ್ಪಂದವೂಡಿಕೊಳ್ಳಲಿರುವೆನೆಂಬುದನ್ನು ರುಜುವಾತು ಪಡಿಸಲು ಹಿಟ್ಲರನ ಕೊಲೆಮಾಡಿ ಆತನ ಮೃತದೇಹವನ್ನು ಮಿತ್ರರಿಗೆ ಒಪ್ಪಿಸುವೆನೆಂದೂ ಆತನು ನುಡಿದಿದ್ದನಂತೆ. ಆದರೆ ಈತನು ತನ್ನ ಶಾಂತಿ ಸೂಚನೆಗಳಲ್ಲಿ ರಷ್ಯಾಕ್ಕೆ ತಾನು ಶಿರಬಾಗಲಾರೆನು; ಬ್ರಿಟನ್, ಅಮೇರಿಕಾಗಳಿಗೆ ಮಣಿಯುವೆನೆಂದಿದ್ದನು. ಆದರೆ ರಷ್ಯಾವನ್ನು ಸೇರಿಸದ ಶರತ್ತುಗಳಿಗೆ ತಾವು ಒಪ್ಪುವದಿಲ್ಲವೆಂದು ಮಿತ್ರರು ಹೇಳಿದ ಕಾರಣ ಪುನಹ ರಷ್ಯಾವನ್ನೂ ಸೇರಿಸಿ ಇವರಿಗೆ ಶರಣಾಗುವ ತಮ್ಮ ಸೂಚನೆಯನ್ನು ಆತನು ಮುಂದಿಟ್ಟಿರುವನಂತೆ.

ಬರ್ಲಿನಿನಲ್ಲಿ ಆತ್ಯುಗ್ರಕಾಳಗವಾಗುತ್ತಿದ್ದರೂ ಬರ್ಲಿನಿನ ಶಕ್ತಿಯುರಿಯಿತೆಂದು ವಾರ್ತೆಗಳು ತಿಳಿಸುತ್ತಿವೆ. ಜರ್ಮನರು ಬರ್ಲಿನಿನಲ್ಲಿ ಬಹು ಸಾಹಸದಿಂದ ಯುದ್ಧ ಮಾಡುತ್ತಿರುವರಂತೆ. ಬರ್ಲಿನಿನ ಪ್ರತಿಯೊಂದು ಮನೆಯೂ ಒಂದೆಸ್ತಂದು ಕೋಟೆಯಂತಿದೆಯಂತೆ. ಪ್ರತಿ ಸ್ಥಳಗಳಲ್ಲೂ ಭೂಗರ್ಭಬಂದೂಕಗಳು ಅಳವಡಿಸಲ್ಪಟ್ಟಿವೆಯಂತೆ. ಮನೆಮನೆಗೇ ಫಿರಂಗಿಸೇನೆಗಳಿಂದ ಧ್ವಂಸಮಾಡಲ್ಪಟ್ಟರೂ ಜರ್ಮನರು ವ್ಯಕ್ತಿಗತವಾಗಿ ಮಿತ್ರರನ್ನು ಪ್ರತಿಭಟಿಸಿ ಸಾಯುತ್ತಿರುವರು. ಹೆಂಗಸರೂ ಕೂಡ ಆಯುಧಹಿಡಿದು ಹೋರಾಡತೊಡಗಿದ್ದಾರೆ. ಇದಲ್ಲದೆ ವಿದ್ಯಾರ್ಥಿಗಳು, ಅಧಿಕಾರಿಗಳು, ಪೊಲೀಸರು, ಕೂಲಿಗಾರರು ಮೊದಲಾದವರು ಸಿಕ್ಕಿದ ಆಯುಧ ತೆಗೆದುಕೊಂಡು ಮಿತ್ರರನ್ನು ಪ್ರತಿಭಟಿಸುತ್ತಿದ್ದಾರೆ. ಬರ್ಲಿನ್‌ನಗರದ ಮುಕ್ಕಾಲು ಭಾಗವು ಮಿತ್ರರ ವಶವಾಗಿದ್ದರೂ ಜರ್ಮನರು ಧೃತಿಗೆಡದೆ ಹೋರಾಡುತ್ತಿರುವದು ಮಿತ್ರರನ್ನು ಮುಗ್ದಗೊಳಿಸಿದೆ. ಬರ್ಲಿನ್‌ನಗರವು ಮಿತ್ರರ ವಶವಾದರೆ ಯುದ್ಧ ಮುಗಿದಂತೆಯೇ; ಜರ್ಮನ್ ಪ್ರತಿಭಟನೆಯ ಆಟ ನಿಂತಂತೆಯೇ ಎಂದು ಕೆಲವರು ಅಭಿಪ್ರಾಯಪಡುತ್ತಾರೆ. ಆದರೆ ಈ ಮೊದಲೇ ನಾನು ಸೂಚಿಸಿದ್ದಂತೆ ಬರ್ಲಿನ್ ನಗರವು ಮಿತ್ರವಶವಾದರೂ ಯುದ್ಧ ಮುಗಿಯಲಾರದು. ತಮ್ಮ ರಾಜಧಾನಿಯೇ ಕೈವಶ ಮಿತ್ರರ ವಶವಾಗುತ್ತಿದ್ದರೂ ಜರ್ಮನರು ನಿರಾಶರಾಗದೆ ಯುದ್ಧ ಮಾಡುತ್ತಿರುವದನ್ನು ನೋಡಿದರೆ ಅವರಿಗೆ ಬೇರೆ ಕಡೆಯಿಂದ ಶಕ್ತಿ ಕೂಡುವ ತಿಬಿರಗಳಿವೆಯೆನ್ನಬೇಕು. ನಾರ್ವೆಯಲ್ಲಿ ಮತ್ತು ಆಸ್ಟ್ರಿಯಾಗಳಲ್ಲಿ ದುರ್ಗಗಳನ್ನು ನಿರ್ಮಿಸಿ ಸೈನ್ಯಸಂಗ್ರಹಮಾಡಿದ ವಿಚಾರ ಈ ಮೊದಲೇ ನಾನು ಬರೆದಿರುವೆನು. ಇವುಗಳ ಬಲದಿಂದ ಜರ್ಮನರು ಹತಾಶರಾಗದೆ ಹೋರಾಡುತ್ತಿರುವರು.

ಆಸ್ಟ್ರೀಯಾದಲ್ಲಿ ಹಿಟ್ಲರನು ರಚಿಸಿದ ದುರ್ಗದ ವಿಚಾರ ಹೆಚ್ಚಿನ ಮಾಹಿತಿ ಈ ವಾರ ತಿಳಿದುಬಂದಿದೆ. ಈ ದುರ್ಗದಲ್ಲಿಯ ಪ್ರದೇಶದ ವಿಸ್ತಾರವು 20,000 ಚದರ ಮೈಲುಗಳೆಂದು ತಿಳಿದುಬಂದಿದೆ. ಇಲ್ಲಿ ಹಿಟ್ಲರನು 140 ಡಿವಿಜನುಗಳಷ್ಟು ಸೇನೆಗಳನ್ನು ಸಂಗ್ರಹಿಸಿಟ್ಟಿರುವನು. ಹಲವಾರು ತಿಂಗಳುಗಳಿಗೆ ಸಾಕಾಗುವಷ್ಟು ಆಹಾರವನ್ನು ಶೇಕರಿಸಿಟ್ಟಿರುವರು. ಭೂಗರ್ಭದಲ್ಲಿ ಕಾರ್ಖಾನೆಗಳನ್ನೂ, ವೈಜ್ಞಾನಿಕ ಪರಿಶೋಧನಾ ಕೇಂದ್ರಗಳನ್ನೂ ಇರಿಸಿದ್ದಾನೆ. ಜರ್ಮನಿಯನ್ನು ನಿಜವಾಗಿಯೂ ಸೋತೆವೆಂದು ಹೇಳುವಂತೆ ಮಾಡಬೇಕಾದರೆ ಈ ದುರ್ಗವನ್ನು ಮಿತ್ರರು ಬೇಧಿಸಬೇಕು.

ಈಗ ಬಂದ ವಾರ್ತೆಗಳಲ್ಲಿ ಹಿಟ್ಲರನು ಸತ್ತನೆಂಬ ವಾರ್ತೆಯಿಂದ ಜರ್ಮನ್ಯುದ್ಧ ಮುಗಿಯಿತೆಂದು ಕೆಲವರೆನ್ನುತ್ತಾರೆ. ಹಿಟ್ಲರನು ಸತ್ತನೆಂಬ ವಾರ್ತೆ ಸಂಶಯಾಸ್ಪದವಾದುದಾಗಿದ್ದರೂ ಆತನ ಬದಲಿಗೆ ಸರ್ವಾಧಿಕಾರಿಯೂಗಿ ನೇಮಿಸಲ್ಪಟ್ಟಿರುವನೆನ್ನುವ ಜನರಲ್ ಡೊನಿಟ್ಸನು ಯುದ್ಧ ಮುಂದರಿಸುವ ಹೇಳಿಕೆ ಕೊಟ್ಟಿರುವನು.

ಇಷ್ಟರ ವರೆಗೆ ತಟಸ್ಥವಾಗಿದ್ದ ಇಟಲಿ ರಣರಂಗದಲ್ಲಿ ಈ ವಾರ ಚಟುವಟಿಕೆ ಕಂಡುಬಂದಿದೆ. ಇಟಲಿ ಯುದ್ಧವು ಪ್ರಥಮವಾಗಿ ಪ್ರಾರಂಭವಾದರೂ ಅದು ಮುಕ್ಯವರ್ಗಕ್ಕೆ ಇಂದೂ ಕಂಡುಬರುವದಿಲ್ಲ ಇಟಲಿಯಲ್ಲಿರುವ ಮಿತ್ರದಂಡುಗಳು ಆಸ್ಟ್ರಿಯಾ ಗಡಿಯಿಂದ 250 ಮೈಲುಗಳ ದೂರದಲ್ಲಿವೆ. ಬರ್ಲಿನಿನ ಮೇಲೆ ಹೂಡಿದ ಧಾಳಿಯಿಂದ ಚೇತನಯಂಕ್ತರಾಗಿ ಮಿತ್ರರು ಇಲ್ಲಿ ಚಟುವಟಿಕೆ ಆರಂಭಿಸಿದ್ದಾರೆ. ಮುಂದೆ ಈ ರಂಗದಲ್ಲಿ ಕರ್ಕಶಕದನವಾಗಬಹುದು.

ಶತ್ರುವನ್ನು ಇರಿಕಿನಲ್ಲಿ ಸಿಲುಕಿಸಬೇಕು, ಜಪಾನನ್ನು ಪಾದಾಕ್ರಾಂತ ಮಾಡಬೇಕೆಂದು ಅಮೆರಿಕನ್ ಸೇನೆಗಳು ಜಪಾನದತ್ತ ಸಾಗುತ್ತಿವೆ. ಜಪಾನೂ ಇದಕ್ಕೆ ಸಿದ್ಧರಿರಬಹುದು. ಜಪಾನರೂ ಕೂಡ ಕಠೋರ ಸಾಹಸದ ಕಟ್ಟಾಳುಗಳು. ಸಂಯುಕ್ತ ಸೇನಾಬಲದ ಹಿರಿಮೆಯೆನ್ನು ಶಿಥಿಲಿಸಿ ಶತ್ರುವಿನ ಶಕ್ತಿ ಸಾಹಸಗಳನ್ನು ಕಡೆಗಣಿಸಲು ಬರುವದಿಲ್ಲ. ತಮ್ಮಲ್ಲಿರುವ ಕೆಚ್ಚು, ಶಕ್ತಿ, ಸಾಹಸಗಳನ್ನು ಜಪಾನರು ತೋರದಿರರು

ಸ್ಯಾನ್‌ಫ್ರಾನ್ಸಿಸ್ಕೋ ಸಮ್ಮೇಳನದಲ್ಲಿ ಭಿನ್ನಾಭಿಪ್ರಾಯವು ಮಿತ್ರಶಿಬಿರದಲ್ಲಿ ತೋರುವ ಚಿಹ್ನೆಗಳು ಕಂಡುಬರುತ್ತಿವೆ. ಕರ್ಮ ಧರ್ಮ ಸಂಯೋಗದಿಂದ ಈ ಸಮ್ಮೇಳನವು ಮುರಿದರೆ ಯುದ್ಧವು ಉದ್ದ ಬೆಳೆಯುವದರಲ್ಲಿ ಸಂಶಯವಿಲ್ಲ. ಈ ಸಮ್ಮೇಳನವು ಜಯಪ್ರದವಾಗದಿದ್ದರೆ ರಷ್ಯಾ ಜರ್ಮನಿಗಳೊಳಗೆ ಒಪ್ಪಂದವಾಗುವದು ಅಸಂಭವವಲ್ಲ ಈ ರೀತಿ ಒಪ್ಪಂದವಾದರೆ ಹಿಂದೆ ಗೋಬೆಲ್ಸನು ಹೇಳಿದಂತೆ ಜಾಗತಿಕ ಇತಿಹಾಸದ ರೂಪವೇ ಬದಲಾಗುವದರಲ್ಲಿ ಸಂಶಯವಿಲ್ಲ.

The Canara Banking Corporation Limited.

(Incorporated in British India Liablity of Members is Limited)

23) ESTD—1906.

Head Office: U D I P I, South Kanara.

Authorised Capital	....	Rs. 25,00,000
Issued & Subscribed Capital	....	Rs. 16,00,000
Paid up capital	....	Rs. 14,92,000
Reserves	....	Rs. 4,43,000

Total Working Capital Exceeds:
ONE CRORE & 35 LAKHS.

ದಿ ಬೋಂಬೆ ಲೈಫ್ ಅಶ್ಯೂರೆನ್ಸ್ ಕಂ. ಲಿಮಿಟೆಡ್.

— ಬೀ ಕಾ ಗಿ ದ್ದಾ ರೆ —

ಜನಬಳಿಕೆಯಿರುವ ಕಾರ್ಯಚತುರ ಏಜೆಂಟರು ಲಾಭದಾಯಕ ಶರತುಗಳ ಮೇಲೆ ಕೊಡಗಿನ ಉದ್ದಗಲಕ್ಕೂ ಬೇಕಾಗಿದ್ದಾರೆ. ಯೋಗ್ಯತೆ, ವಯಸುಗಳನ್ನು ಸೂಚಿಸಿ ಬರೆಯಿರಿ.

ಕೊಚ್ಚಿಕಾರ್ ಬ್ರದರ್ಸ್, ಲಿ.

ಮದ್ರಾಸ್ ಬ್ರಾಂಚಿನ ಸೆಕ್ರೆಟರಿಗಳು.

27) ಪಿ. ಬಿ. ನಂ. 337, ಮದ್ರಾಸು.

ಎಂಪೈರ್ ಆಫ್ ಇಂಡಿಯಾ

ಲೈಫ್ ಅಷ್ಯೂರೆನ್ಸ್ ಕಂಪೆನಿ, ಲಿಮಿಟೆಡ್.

12) ಸ್ಥಾಪನೆ:—೧೮೯೭.

೪೭ನೇ ವಾರ್ಷಿಕ ವರದಿಯಲ್ಲಿನ ಕೆಲವು ಸ್ಪಷ್ಟ ಸಂಗತಿಗಳು.	ಒಟ್ಟು ಆದಾಯ		೯೭,೩೭,೦೦೦ ರೂಪಾಯಿ
	ಚಾಲ್ತಿಯಿರುವ ವಿಮೆ		೧೬,೪೯,೪೮,೦೦೦ ,,
	ಆಸ್ತಿ	....	೬,೩೦,೪೬,೦೦೦ ,,
ಕಂಪೆನಿಯ ಆದಿಯಲ್ಲಿ ಕೊಟ್ಟ ಕ್ಲೈಮುಗಳು			೮,೩೮,೦೦,೦೦೦ ,,

ಅಂಗ ಕಛೇರಿ:	ಏಜೆನ್ಸಿ	ಪ್ರಧಾನ ಕಛೇರಿ:
ಡಿಸ್ಟ್ರಿಕ್ಟ್ ಬೋರ್ಡ್ ಬಿಲ್ಡಿಂಗ್,	ಅರ್ಜಿಗಳನ್ನು	ಎಂಪೈರ್ ಆಫ್ ಇಂಡಿಯಾ
ಕೆಂಪೇಗೌಡ ರಸ್ತೆ, ಬೆಂಗಳೂರು.	ಸ್ವಾಗತಿಸಿದೆ.	ಲೈಫ್ ಬಿಲ್ಡಿಂಗ್ ಬೋಂಬೆ

"ಟ್ರಾ ಪಿ ಕ ಲ್"

ಪಂ. ಮೋತಿಲಾಲ್ ನೆಹರೂ, ಹಕೀಮ್ ಅಜಮಲ್‌ಖಾನ್, ಡಾ. ಯಂ. ಎ. ಅನ್ಸಾರಿ, ಸುಬಾಶ ಚಂದ್ರ ಬೋಸ್

ಮೊದಲಾದ ರಾಷ್ಟ್ರೀಯ ಧುರೀಣರಿಂದ ಸ್ಥಾಪಿಸಿ,

ಬೆಳೆಸಲ್ಪಟ್ಟ ರಾಷ್ಟ್ರೀಯ ವಿಮಾ ಸಂಸ್ಥೆ.

ಜೀವನ ಸಂಧ್ಯಾ ಕಾಲದಲ್ಲಿ ಜೀವವಿಮೆಯೇ ನಿಮ್ಮನ್ನು ರಕ್ಷಿಸುವದು. ಆದ್ದರಿಂದ ಹಿಂದೂ ದೇಶದ ರಾಷ್ಟ್ರೀಯ ಸಂಸ್ಥೆಗಳಲ್ಲಿ ಹಿರಿದಾದ **ಟ್ರಾಪಿಕಲಿನಲ್ಲಿ** ವಿಮೆ ಮಾಡಿರಿ.

ಮುಖ್ಯ ಖಛೇರಿ: ಹೊಸ ದಿಲ್ಲಿ] [ಹೆಚ್ಚಿನ ಮಾಹಿತಿಗೆ ಈ ಪತ್ತೆಗೆ ಬರೆಯಿರಿ:

ಯಂ. ಯು. ಅಚ್ಚಣ್ಣ, ಇನ್ಸ್‌ಪೆಕ್ಟರ್. **ಯಂ. ರಂಗನಾಥಶೆಟ್ಟಿ,**

9) ಮಡಿಕೇರಿ. OR ಬ್ರಾಂಚ್ ಮೇನೇಜರ್, ಮಂಗಳೂರು.

ಕೊಡಗು ಸೆಂಟ್ರಲ್ ಸಹಕಾರಿ ಬ್ಯಾಂಕ್, ಲಿಮಿಟೆಡ್, ಮಡಿಕೇರಿ.

ಕೋ-ಆಪರೇಟಿವ್ ಸೊಸೈಟೀಸ್ ಆಕ್ಟ್ ಪ್ರಕಾರ ರಿಜಿಸ್ಟರಾಗಿದೆ. (1931ರಲ್ಲಿ ಸ್ಥಾಪಿತವಾಗಿದೆ.

ವಸೂಲಾದ ಶೇರ್ ಮೊಬಲಗು ರೂ. 95,060, ಜಮಾ ಬಂದ ಠೇವಣಾತಿ 2,24.750 ವಸೂಲಾದ ಕ್ಷೇಮನಿಧಿ 2,16,209, ಸೇವಿಂಗ್ಸ್ ಬ್ಯಾಂಕ್ ಡಿಪಾಜಿಟ್ಟು 2,02,925.

ಈ ಬ್ಯಾಂಕಿನಿಂದ ಸಹಕಾರ ಸಂಘಗಳಿಗೇನೇ ಹೆಚ್ಚಾಗಿ ಸಾಲ ಕೊಡುವುದಲ್ಲದೆ ಡಿಪಾಜಿಟ್ಟುದಾರರಿಗೆ ಅವರ ಡಿಪಾಜಿಟ್ಟು ಆಧಾರದ ಮೇಲೆ 90% ಕೊಡಲಾಗುತ್ತೆ. ನಿರಖು ಠೇವಣಾತಿಗಳಿಗೆ ಒಂದು ವರ್ಷದಿಂದ ಮೂರು ವರ್ಷಗಳ ವರೆಗೆ ಶೇಕಡ 2. ಮೂರು ವರ್ಷಗಳಿಂದ ಐದು ವರ್ಷಗಳ ವರೆಗೆ 2½. ಐದು ವರ್ಷಗಳಿಂದ ಹತ್ತು ವರ್ಷಗಳ ವರೆಗೆ 3½. ಹತ್ತು ಅದಕ್ಕಿಂತ ಮೇಲ್ಪಟ್ಟವುಗಳಿಗೆ 4½. ಸೇವಿಂಗ್ಸ್ ಬ್ಯಾಂಕ್ (on daily balance) ಡಿಪಾಜಿಟ್ಟುಗಳಿಗೆ ಶೇಕಡ 0—8—0. ವರ್ಷಕ್ಕೊಮ್ಮೆ ರಿಜಿಸ್ಟ್ರಾರರು ಲೆಕ್ಕ ಪರಿಶೋಧನೆ ಮಾಡುತ್ತಾರೆ.

ಹಳ್ಳಿಗರ ಬಗೆಹರಿಯದ ಪಾಡು.

ಮಾತೃಭೂಮಿಯ ಸೇವೆಯನ್ನು ಮಾಡಲು ಯಾವನು ತಾನೆ ಹಿಂಜರಿಯುವನು? ತನಗೆ ಜನ್ಮವಿತ್ತು, ಅನ್ನಪಾನೀಯಗಳನ್ನೀಯುವ ತಾಯ್ನಾಡಿನ ಏಳ್ಗೆಗೆ ಆವ ನಾಗರಿಕನು ತಾನೆ ದುಡಿಯದಿರುವನು? ಅದರಲ್ಲೂ ಭಾರತವು ವೀರರ ತವರೂರು; ಧೀರರ ನೆಲೆಯೂರು; ದೇಶಸೇವಕರ ಹುಟ್ಟೂರು. ಭಾರತ ವರ್ಷದ ಭಾಗ್ಯಬಾವುಟ ಗಗನದಲ್ಲಿ ಪಟಪಟನೆ ಹಾರುತ್ತಿತ್ತು ಹಿಂದೊಮ್ಮೆ. ಆದರೆ ಇಂದೇಕೆ ಹಿಂದೂದೇಶ ಇಂತಾಗಿದೆ?

ನಮ್ಮ ದೇಶವು ಕೃಷಿಪ್ರಧಾನವಾದ ಹಳ್ಳಿಗಳಿಂದ ಕೂಡಿದುದು. ಆದುದರಿಂದ ದೇಶದ ಏಳಿಗೆಯು ರೈತನ ಕೈಯಲ್ಲೂ ಇದೆಯೆಂದರೂ ತಪ್ಪಾಗಲಾರದು. ನಮ್ಮ ನಾಡಿಂದು ನೈಸರ್ಗಿಕವಾಗಿಯೇ ಕೃಷಿಗೆ ಅನುಕೂಲವಾಗಿದೆಯೆಂದ ಬಳಿಕ, ನಾವು ಆಹಾರಕ್ಕಾಗಿ ಆನ ಕಾಲದಲ್ಲೂ ಹಾಹಾಕಾರವನ್ನು ತರಬೇಕಾಗಿಲ್ಲ! ಆದರೆ ನಮ್ಮ ಊರಲ್ಲಿ ಬಂಜರು ನೆಲಗಳಾಗಿ, ಎಂದರೆ ಕೃಷಿಯನ್ನು ಮಾಡಲು ಸಾಧ್ಯವೇ ಇಲ್ಲವೆಂದು ಬಿಡುವಂತಹ ಪ್ರದೇಶಗಳಲ್ಲಿ ಪಶರಾಷ್ಟ್ರೀಯರು, ನಮ್ಮ ಫಲವತ್ತಾದ ಪ್ರದೇಶದಲ್ಲಿ ಬೆಳೆಯತಕ್ಕ ಎಷ್ಟೋ ಹೆಚ್ಚಿಗೆ ಸಾಲು ಬೆಳೆಯನ್ನು ಉತ್ಪನ್ನಮಾಡುವರೆಂದರೆ ಆಶ್ಚರ್ಯವೆ! ನಾವು ಹಿಂದುಳಿಯಲು ಕಾರಣವೇನು? ಕೃಷಿಯಲ್ಲಿ ಸುಧಾರಣೆಯಿಲ್ಲ. ನಮ್ಮಲ್ಲಿ ಕಂಡುಬರುವ ಕೃಷಿಯ ಪದ್ಧತಿಯು ಬಹಳ ಪುರಾತನವಾದುದು, 'ಅಜ್ಜ ನೆಟ್ಟ ಆಲದ ಮರ'ದಂತೆ ಇಂದು ನಮ್ಮ ಕೃಷಿಯು ಕಂಡು ಬರುತ್ತಿದೆ.

ಕೃಷಿ ಸುಧಾರಣೆ ಹೊಂದಬೇಕಾದರೆ ಕೃಷಿಕನು ವಿದ್ಯಾವಂತನಾಗಬೇಕು. ಆದರೆ ಇಂದಿನ ಈ ಮಾತೃಭಾಷೆಗೆ ಪ್ರಾಮುಖ್ಯವನ್ನು ಕೊಡದ ಈ ಕಾಲದಲ್ಲಿ—ಕೃಷಿಕನು ವಿದ್ಯಾವಂತನಾಗುವುದೆಂದರೆ ಕನಸಿನ ನೆನಸೇ ಸರಿ. ಕೃಷಿ ಇಲಾಖೆಯೇನೋ ವ್ಯವಸಾಯಾಭಿವೃದ್ಧಿಗೆ ಯತ್ನಿಸುತ್ತಿದೆ; ಆದರೆ ಹಳ್ಳಿಯ ಮೂಲೆಗಳಲ್ಲಿ ತಿರುಗಿ ನೋಡಿದರೆ ಕಾಣಸಿಗುವ ಗಾವಿಲನಿಗೆ, ಕೃಷಿಯನ್ನು ಉನ್ನತಿಗೆ ತರುವ ಯತನೆಗೆ ಸಹಾಯಮಾಡುವ ಕೃಷಿ ಇಲಾಖೆಯೊಂದಿದೆ ಎಂಬುದೇ ಅರಿಯದು!

ಹಳ್ಳಿಗನು ಏಕೆ ವಿದ್ಯಾವಂತನಾಗಲಾರದು? ಎಂಬುದೊಂದು ಪ್ರಶ್ನೆ; ಇಂದು ವಿದ್ಯಾಭ್ಯಾಸವು ಇಂಗ್ಲಿಷ್ ಭಾಷೆಯಲ್ಲಿ ಎಂಬುದನ್ನು ನಾವೆಲ್ಲರೂ ಅರಿತಿರುವೆವು. ವಿದ್ಯಾಭ್ಯಾಸಕ್ಕೆ ಪಟ್ಟಣಕ್ಕೆ ಬರಬೇಕು! ಕೈತುಂಬ ಹಣ ಬೇಕು! 'ಸಾವಿರಗಟ್ಟಲೆ ವೆಚ್ಚಮಾಡಿ ವಿದ್ಯೆ ಕಲಿಯಲು ಹಣವಿರುತ್ತಿದ್ದರೆ ಈ ಬೇಸಾಯವೇ ಬೇಡವಾಗಿತ್ತಲ್ಲ!' ಎಂದು ಕೆಲ ಕೃಷಿಕರ ಅಂಬೋಣ. ಅಹುದು! ನೇಗಿಲ ಮೊನೆಯೊಂದನ್ನು ತರಲೂ ಹಣವಿಲ್ಲವೆಂದು ಗೋಳಿಡುವ ಬಡಪಾಯಿಯು ವಿದ್ಯೆಯನ್ನೆಂತು ಕಲಿಯುವನು? ಏನೊ ಒಂದು ನಾಲ್ಕೈದನೇ ತರಗತಿಯ ವರೆಗಾದರೂ ಕಲಿತುಬಿಡುವ ಎಂದರೆ ಅದರಿಂದೇನೂ ಪ್ರಯೋಜನವಿಲ್ಲ; ವಿದ್ಯಾಭ್ಯಾಸವು ಪೂರ್ತಿಯಾಗಲಿಲ್ಲ. ಒಂದು ವೇಳೆ ಪ್ರಾಥಮಿಕ ವಿದ್ಯೆಯನ್ನು ಕಲಿತು ಓದುಬರಹವನ್ನು ಆತನರಿಯುತ್ತಿದ್ದರೂ ಅದರಿಂದ ಅಲ್ಪ ಸ್ವಲ್ಪ ಜ್ಞಾನವನ್ನು ಪಡೆಯುತ್ತಿದ್ದರೂ, 'ಹೊತ್ತಾರೆ ಎದ್ದು ಹೊತು ಸೋತ್ತು ಹೋಗುವವನಿಗೆ ಈ ಅಲ್ಪ ವಿದ್ಯೆಯೇಕೆ?' ಎಂಬನಿಸುವ ರೈತರೇ ಬಹಳ!

ಹೀಗೆ ದೊರಕಿವ ಹಣದಲ್ಲಿಯೂ ಪ್ರಯೋಜನಕ್ಕೆ ಬಾರದ ಎಷ್ಟೋ ದುಶ್ಚಟಗಳಿಗೆ ಬಲಿಬಿದ್ದು, 'ಬಾವಿಗೆ ಬಿದ್ದಲ್ಲೂ ಕಲ್ಲು' ಎಂಬಂತೆ ಬಲು ಕಷ್ಟಕ್ಕೆ ಈಡಾಗುವನು. ಸಂಜೆಯಾದರೂ ಕಳ್ಳಂಗಡಿಗೆ ಹೋಗದೆ ನಿವಾರಿಹವೇ ಇಲ್ಲ! 'ಊಟ ಇಲ್ಲದಿದ್ದರೂ ಚಿಂತಿಲ್ಲ; ಆದನ್ನ ಬಿಡಲು ಸಾಧ್ಯವಿಲ್ಲ!' ಎನ್ನುವವರೇ ಹಲವರು. ಈ ಕಳ್ಳಂಗಡಿಯಿಲ್ಲದಿದ್ದರೆ ಶರಾಬಿನಂಗಡಿಯ ಪ್ರಸಾದವನ್ನಾದರೂ ಪಡೆಯಬೇಕು! ಇಡೀ ಜೀವಮಾನವನ್ನೇ ಅದಕ್ಕೋಸ್ಕರ ಮೂರಿ, ತಮ್ಮ ಜೀವಿತವನ್ನೇ ವ್ಯೆಯ್ಯಗೊಳಿಸುವರು.

ಇನ್ನೊಂದು ಪೋಷಾಕು. ಹೆಂಗಸರೆಂದಿಲ್ಲ, ಗಂಡಸರೆಂದಿಲ್ಲ ಎಲ್ಲರೂ ಇದರ ಸೇವಕರು. ಭಜನೆ ಮಂಡಳಿ ಸ್ಥಾಪಿಸಿ, ಗಜಾನನನಿಗೆ ಕೈಯ್ಯುಗಿವ ಬ್ರಾಹ್ಮಣರೂ ಪೋಷಾಕಿಗೆ ಶರಣು ಎಂದ ಬಳಿಕ ಉಳಿದವರ ಪಾಡೇನು?

ನಾಗರಿಕತೆ ಹೊಂದಿ, ನವಸುಧಾರಣೆಯ ಅನುಭವ ಪಡೆದ ಶಿಕ್ಷಿತ ಬಂಧುಗಳು ಮುಂದಾಗಬೇಕು. ತಮ್ಮ ಅಶಿಕ್ಷಿತ ಸಹೋದರರಿಗೆ ವಿದ್ಯಾದಾನವಿತ್ತು, ಅವರಲ್ಲಿದ್ದ ಅಜ್ಞಾನವನ್ನು ಹೋಗಲಾಡಿಸಬೇಕು. ಈಗ ಇರುವ ನಿದ್ದೆಯ ಅಮಲಿನಿಂದ ಅವರನ್ನು ಹೊಡೆದೆಬ್ಬಿಸಬೇಕು. ಅವರಿಗೆ ಅಂಟಿಕೊಂಡಿದ್ದ ದುರ್ವ್ಯಸನಗಳನ್ನು ಹೋಗಲಾಡಿಸುವ—ಹೃದಯಕ್ಕೆ ನಾಟುವ ಬೋಧನೆ ಅತ್ಯವಶ್ಯ. ಹಳ್ಳಿಗಳಲ್ಲಿ ಅಲ್ಲಲ್ಲಿ ರಾತ್ರಿ ಶಾಲೆಗಳನ್ನೋ, ವಯಸ್ಕರಿಗೆ ವಿದ್ಯೆ ಕಲಿಸುವ ಶಾಲೆಗಳನ್ನೋ ತೆರೆದು, ಸಾಧ್ಯವಾದಷ್ಟು ಮಟ್ಟಿಗೆ ಅಕ್ಷರ ಜ್ಞಾನ, ವಸ್ತು ಜ್ಞಾನ ಅವರಿಗೆ ಮೂಡಿಸಿಕೊಡಬೇಕು. ಒಮ್ಮೆ ಅವರು ವಿದ್ಯಾವಂತರಾದರೆಂದರೆ ಅವರ ಜೀವನ ಬೆಳಗಿಸುವ ದಾರಿ ಅವರಿಗೆ ತಾನಾಗಿ ತೋಚದಿರದು.

'ನ. ಭಾ.'

Edited, Printed and Published by P. I. Belliappa at 'Kodagu' Press, Mercara, for 'Kodagu' Ltd.